ಮಾಂಸಖಂಡಗಳ ಶಕ್ತಿಯನ್ನೆಲ್ಲಾ ಒಟ್ಟುಗೂಡಿಸಿ ಅದರ ತರೆದ ಬಾಯಿಯಲ್ಲಿ ಕರಾಳವಾಗಿ ಹೊಳೆಯುತ್ತಿದ್ದ ಹಳದಿ ಚೂಪು ಹಲ್ಲುಗಳ ಮೇಲೆ ಗುದ್ದಿದೆ. ಅನಿರೀಕ್ಷಿತ ಪ್ರಹಾರಕ್ಕೆ ಅದು ಅರೆಚಣ ನಿಶ್ಚಲಗೊಂಡ ಅವಕಾಶವನ್ನು ಉಪಯೋಗಿಸಿಕೊಂಡು ಅದರ ಕುತ್ತಿಗೆಯನ್ನು ಹಿಡಿದೆ, ಹಿಡಿದು ಬಲವಾಗಿ ಒತ್ತಿದೆ. ಪರಿಣಾಮ ಅದ್ಭುತ, ಸಂಕೋಲೆ ಸಡಿಲಾಯಿತು. ಕಾಲುಗಳನ್ನು ಝಾಡಿಸಿ ಇನ್ನಷ್ಟು ಬಿಡಿಸಿಕೊಂಡೆ. ಇನ್ನೊಂದು ಝಾಡಿಸುವಿಕೆಗೆ ನಾನು ಸ್ವತಂತ್ರನಾದೆ. ಸರ್ಪವನ್ನೆತ್ತಿ ಬೀಸಿ ಒಗೆದೆ. ಅದು ಹೋಗಿ ನಾಯಿಯ ಮೇಲೆ ಬಿತ್ತು. ನನ್ನ ಅದೃಷ್ಟವೆಂದರೆ ಇದು! ಇನ್ನು ಸರ್ಪದ ಕಥೆ ಮುಗಿಯಿತು!

ಗಡಬಡಿಸಿ ಎಚ್ಚರಗೊಂಡ ನಾಯಿ ಸರ್ಪದ ನೋಟವನ್ನನುಸರಿಸಿ ನನ್ನತ್ತ ತಿರುಗಿತು. ಛಂಗನೆ ಮೇಲೆದ್ದು ನಿಂತಿತು.

ಅದಕ್ಕೆ ನನ್ನ ಗುರುತಾಗಿದೆ! ಇನ್ನು ನನಗೆ ಭಯವಿಲ್ಲ. ಸಂತಸಗೊಂಡೆ. ಅದರತ್ತ ಮುಗುಳ್ನಕ್ಕೆ. ಅದು ಬಾಯಿ ತೆರೆಯಿತು. ಕೋರೆಹಲ್ಲುಗಳು ಹೊರ ಚಾಚಿದವು. ಅದು ಪಕ್ಕದಲ್ಲಿ ತೆವಳುತ್ತಿದ್ದ ಸರ್ಪದತ್ತ ತಿರುಗಿತು.

ಇನ್ನು ನಡೆಯುವುದೇ ಕುರುಕ್ಷೇತ್ರ ಕಾಳಗ!

ನಾನು ನೋಡಿಯೇ ನೋಡಿದೆ. ನಾಯಿ ಸರ್ಪದ ಮೇಲೆ ಎರಗಲಿಲ್ಲ. ಅವೆರಡೂ ಏನೋ ಮಾತಾಡಿಕೊಂಡವು. ನಾಯಿ ನನ್ನತ್ತ ತಿರುಗಿತು. ಜೀವಮಾನದ ಶತ್ರುವನ್ನು ಕಂಡಂತೆ ಅದರ ಕಣ್ಣುಗಳು ಕೆಂಪಗಾದವು. ಕೋರೆಹಲ್ಲುಗಳ ನಡುವಿನಿಂದ ಬೌ ಬೌ ಎಂಗಬ ಶಬ್ಧ ಹೊರಟಿತು.

ನಾಯಿ ಭಯಂಕರವಾಗಿ ಬೊಗಳುತ್ತಾ ನನ್ನತ್ತ ಚಿಮ್ಮಿ ಬಂತು. ಒಂದೊಂದು ಜಿಗಿತಕ್ಕೂ ಕೋರೆಹಲ್ಲುಗಳು ಹರಿತಗೊಂಡು ಹೊಳೆದವು, ಬೊಗಳಾಟ ತಾರಕಕ್ಕೇರಿ ಕಿವಿ ಇರಿಯಿತು. ಅನಿರೀಕ್ಷತ ವಿಪತ್ತು ನನಗೆದುರಾಗಿತ್ತು. ನಾನು ದಿಕ್ಕೆಟ್ಟೆ. ಅತೀವ ಭೀತಿಯಲ್ಲಿ ನಡುಗಿಹೋದೆ.

ನಾನೀಗ ಏನಾದರೂ ಮಾಡಬೇಕು. ನಾನು ಬದುಕಬೇಕು. ಈ ದುಷ್ಟ ನಾಯಿಯನ್ನು ಹಿಮ್ಮೆಟ್ಟಿಸಲೇಬೇಕು.

ಮುಂದೆ ನಿಂತು ಕೋರೆಹಲ್ಲುಗಳನ್ನು ನನ್ನ ಭುಜಕ್ಕೆ ನಾಟಲು ತಯಾರಾದ ನಾಯಿಯ ಮೂತಿಯನ್ನು ಎರಡೂ ಅಂಗೈಗಳ ನಡುವೆ ಸಿಕ್ಕಿಸಿಕೊಂಡು ಒತ್ತಿದೆ. ಹಾಗೇ ಹಿಡಿದೆತ್ತಿ ಒಗೆದೆ. ನನ್ನಿಂದ ಮೂರು ಮಾರು ದೂರಕ್ಕೆ ಬಿದ್ದ ನಾಯಿ ಮತ್ತೆ ಮೇಲೆದ್ದು ಬರುವುದರೊಳಗೆ ನಾನು ಇಲ್ಲಿಂದ ಓಡಿಬಿಡಬೇಕು. ಓಡಿದೆ. ಕಂಡದ್ದು ಬೇತಾಳ.

ನಾಯಿ ಮತ್ತು ಸರ್ಪ ಒಟ್ಟಿಗೇ ದಾಳಿಯಿಡುವುದರಿಂದ ತಪ್ಪಿಸಿಕೊಳ್ಳಲು ನನಗಾಗದು. ನಾನೀಗ ಬೇತಾಳದ ಮೊರೆಹೊಗದೇ ಬೇರೆ ದಾರಿಯಿಲ್ಲ. ನನ್ನನ್ನು ಈ ಕ್ಷಣದಲ್ಲೇ ಸಪ್ತಸಾಗರದಾಚೆ ಕೊಂಡೊಯ್ದು ಈ ಜೀವನ್ಮರಣದ ಅಪಾಯದಿಂದ ಕಾಪಾಡುವ ಸಾಮರ್ಥ್ಯವಿರುವುದು ಬೇತಾಳಕ್ಕೆ ಮಾತ್ರ. ಹಾಗೆ ಮಾಡೆಂದು ಅದನ್ನು ಕೇಳಬೇಕು. ಕೇಳುವುದೇನು, ಅಪ್ಪಣೆ ಮಾಡಬೇಕು. ಕೊಂಬೆಯಿಂದ ಬಿಡಿಸಿಕೊಂಡು ನನ್ನತ್ತ ಬಳುಕಾಡುತ್ತಾ ತೇಲಿಬರುತ್ತಿದ್ದ ಬೇತಾಳದತ್ತ ನೋಡಿದೆ.

ಬೇತಾಳದ ಮುಖ ಬೆಳ್ಳಗೆ ಅಂಡಾಕಾರವಾಗಿತ್ತು. ತಲೆ ತುಂಬಾ ಇದ್ದ ಕಪ್ಪು ಕೇಶರಾಶಿ ಸೊಂಟದವರೆಗೆ ಅಲೆಅಲೆಯಾಗಿ ಇಳಿದಿತ್ತು. ನೇರ ಬೈತಲೆ ನನಗೆ ಸುಗಮ ದಾರಿಯಂತಿತ್ತು.ನವಿರುನವಿರು ಮುಂಗುರುಳುಗಳು ಗಾಳಿಯಲ್ಲಿ ಏನನ್ನೋ ಹಿಡಿಯುವಂತೆ ಹಾರಾಡುತ್ತಿದ್ದ ನೋಟವೇ ಒಂದು ಅಂದ. ಅಗಲ ಹಣೆ, ಮಿನಿನಾಕಾರದ ಕಣ್ಣುಗಳು, ಬಿಲ್ಲಿನಾಕಾರದ ತೆಳು ಹುಬ್ಬುಗಳು, ಸಂಪಿಗೆ ಮೊಗ್ಗಿನಂತಹ ಮೂಗು, ಪುಟ್ಟ ಬಾಯಿ, ಮುಗುಳ್ನಗೆಯಲ್ಲಿ ಬಿರಿದ ರಸಭರಿತ ಗುಲಾಬಿ ತುಟಿಗಳ ನಡುವೆ ಫಳಕ್ಕನೆ ಮಿನುಗಿದ್ದು ಎರಡು ಅಗಲ ಹಾಲುಬಿಳುಪು ಹಲ್ಲುಗಳು. ಆ ಮುಖವೊಂದು ಸೌಂದರ್ಯ ಖನಿ.

ಮುಖದ ಕೆಳಗೆ ಕಂಡದ್ದು ಮೋಹ. ನಿಮಿರಿ ನಿಂತ ಸ್ತನದ್ವಯಗಳು ನನ್ನ ಕಣ್ಣುಗಳನ್ನು ತಮ್ಮತ್ತ ಸೆಳೆದುಕೊಂಡವು. ಅವುಗಳನ್ನು ಮನದಣಿದು ನೋಡಿ ಮನಸ್ಸಿಲ್ಲದ ಮನಸ್ಸಿನಿಂದ ನೋಟವನ್ನು ಕೆಳಗೆ ಹರಿಸಿದೆ. ತೆಳು ನಡು, ವಿಸ್ತಾರವಾಗುತ್ತಾ ಸಾಗಿ ನಂತರ ಮತ್ತೆ ತೆಳ್ಳಗಾಗುತ್ತಾ ಹೋಗಿ ಉದ್ದನೆಯ ಬಾಲವಾಗಿತ್ತು.

ಬೇತಾಳ ನಳಿದೋಳುಗಳನ್ನು ಚಾಚಿ ನನ್ನತ್ತ ತೇಲಿ ಬಂತು.

ನನಗೀಗ ಸರ್ಪ ಮತ್ತು ನಾಯಿಯಿಂದ ಮುಕ್ತಿಯಷ್ಟೇ ಅಲ್ಲ, ಸರ್ವ ಸುಖ ತುಂಬಿದ ಬದುಕೇ ನನ್ನತ್ತ ತೋಳು ಚಾಚಿದೆ! ಎಲ್ಲ ನೋವನ್ನೂ ಮರೆತು ಉತ್ಸಾಹ,